ಓ.ಎಸ್. ನಂ. 129/2022
ಪಿ. ಡಬ್ಲ್ಯೂ 1

**ದಿನಾಂಕಃ 28-08-2024**

ಸಾಕ್ಷಿಗೆ ಪ್ರಮಾಣ ಬೋಧಿಸಲಾಯಿತು.

ಮುಂದುವರೆದ ಪಾಟೀ ಸವಾಲುಃ **3** ರಿಂದ **5** ನೇ ಪ್ರತಿವಾದಿಯರ ಪರ ವಕೀಲರಾದ ಶ್ರೀ ಎಸ್ ಬಿ ಪಿ ರವರಿಂದಃ

ನಮ್ಮ ಉಪ ಜೀವನವು ದಾವಾ ಆಸ್ತಿಯ ಮೇಲೆ ಅವಲಂಬನೆ ಇರುತ್ತದೆ ಎಂದರೆ ಸರಿ. ನಮ್ಮ ಸೌರಕ್ಷಣೆಯು 1 ನೇ ಪ್ರತಿವಾದಿಯ ಮೇಲೆ ಇರುತ್ತದೆ ಎಂದರೆ ಸರಿ. ನನ್ನ ವಿದ್ಯಾಭ್ಯಾಸದ ಖರ್ಚು ಹಾಗೂ ಮದುವೆಯ ಖರ್ಚನ್ನು 1 ನೇ ಪ್ರತಿವಾದಿಯೇ ಮಾಡಿರುತ್ತಾರೆ ಎಂದರೆ ಸರಿ. ದಾವಾ ಆಸ್ತಿಯಲ್ಲಿ 1 ನೇ ಪ್ರತಿವಾದಿಗೆ ಅರ್ಧ ಪಾಲು ಹಾಗೂ 2 ನೆ ಪ್ರತಿವಾದಿಗೆ ಅರ್ಧ ಪಾಲು ಇರುತ್ತದೆ ಎಂದರೆ ಸರಿ. 1 ನೇ ಪ್ರತಿವಾದಿಯು ಕುಟುಂಬದ ಕರ್ತಾ ಆಗಿದ್ದ ಕಾರಣ ಅವರಿಗೆ ಜಮೀನನ್ನು ಮಾರಾಟ ಮಾಡುವ ಅಧಿಕಾರವನ್ನು ಹೊಂದಿರುತ್ತಾರೆ ಎಂದರೆ ಸಾಕ್ಷಿಯು ಏಕೆ ನಮಗೆ ಹೇಳಲಾರದೆ ಮಾರಿರುತ್ತಾರೆ ಎಂದು ಹೇಳುತ್ತಾರೆ. ನಾವು ಕೆಳವೊಂದು ಕಾಗದ ಪತ್ರಗಳ ಮೇಲೆ ಸಹಿ ಮಾಡಿ ಒಪ್ಪಿಗೆ ಪತ್ರವನ್ನು ಬರೆದುಕೊಟ್ಟಿರುತ್ತೇವೆ ಎಂದರೆ ಸರಿಯಲ್ಲ ಒಪ್ಪಿಗೆ ಪತ್ರವನ್ನು ಬರೆದು ಕೊಟ್ಟಿರುತ್ತೇನೆ ಎಂದು ನಾನು ಹೇಳಿದರೆ ಈ ದಾವೆಯು ನನ್ನ ವಿರುದ್ದ ಆಗುತ್ತದೆ ಎಂದು ತಿಳಿದುಕೊಂಡು ನಾನು ಒಪ್ಪಿಗೆ ಪತ್ರವನ್ನು ಬರೆದುಕೊಟ್ಟಿರುವುದಿಲ್ಲ ಎಂದು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನೂರಾರು ಜನರು ನಿವೇಶನಗಳನ್ನು ಖರೀದಿ ಮಾಡಿದವರನ್ನು ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ನೀವು ಮಾಡಿರುವುದಿಲ್ಲ ಎಂದರೆ ಸಾಕ್ಷಿಯು ನಾವು ಯಾರನ್ನು ನೋಡಿರುವುದಿಲ್ಲ, ಎಲ್ಲಾ ಸುಳ್ಳು ಇರುತ್ತದೆ ಎಂದು ಹೇಳುತ್ತಾರೆ.

2 ನೇ ಪ್ರತಿವಾದಿಯ ಆಸ್ತಿಯಲ್ಲಿ ನಮಗೆ ಯಾವುದೇ ರೀತಿಯ ಪಾಲು ಇರುವುದಿಲ್ಲ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿಯ ಅರ್ಧ ಭಾಗದ ಆಸ್ತಿಯನ್ನು ಮಾರಾಟ ಮಾಡಿರುತ್ತಾನೆ ಹಾಗೂ 2 ನೇ ಪ್ರತಿವಾದಿ ಆತನ ಪಾಲದ ಆಸ್ತಿಯನ್ನು ಮಾರಾಟ ಮಾಡಿರುತ್ತಾನೆ ಎಂದರೆ ಸಾಕ್ಷಿಯು ಇಲ್ಲಾ ಎಲ್ಲಾ ಸುಳ್ಳು ಇರುತ್ತದೆ ಎಂದು ಹೇಳುತ್ತಾರೆ. 2 ನೇ ಪ್ರತಿವಾದಿಯ ಆಸ್ತಿಗೆ ನಾನು ಯಾವುದೇ ರೀತಿಯ ಸಂಬಂಧ ಇರುವುದಿಲ್ಲ ಎಂದರೆ ಸರಿಯಲ್ಲ. 2 ನೇ ಪ್ರತಿವಾದಿಯು ಆತನ ಆಸ್ತಿಯನ್ನು ನಮಗೆ ಕೊಟ್ಟಿರುತ್ತಾನೆ ಎಂದು ದಾವೆಯಲ್ಲಿ ನಾನು ಬರೆದಿರುವುದಿಲ್ಲ. 2 ನೇ ಪ್ರತಿವಾದಿಯ ಆಸ್ತಿಗೆ ನಾವು ಯಾವುದೇ ರೀತಿಯ ಸಂಬಂಧ ಹೊಂದದೆ ಇರುವ ಕಾರಣ ನಾನು ವಾದ ಪತ್ರದಲ್ಲಿ ಬರೆಸಿರುವುದಿಲ್ಲ ಎಂದರೆ ಸರಿಯಲ್ಲ 2 ನೇ ಪ್ರತಿವಾದಿಯು ಮೃತಪಟ್ಟ ನಂತರ ಆತನ ಹೆಂಡತಿ ಜೀವಂತವಾಗಿದ್ದಳು ಎಂದು ನನಗೆ ಗೊತ್ತಿರುತ್ತದೆ. ಆದ್ದಗರಿಂದ 2 ನೇ ಪ್ರತಿವಾದಿಯ ಹೆಂಡತಿಯನ್ನು ಈ ದಾವೆಯಲ್ಲಿ ನೀವು ಪಕ್ಷಗಾರರನ್ನಾಗಿ ಸೇರ್ಪಡೆ ಮಾಡಿರುವುದಿಲ್ಲ ಎಂದರೆ ಸಾಕ್ಷಿಯು ನಿಮ್ಮದೆ ಇದೆ ಏಲ್ಲಾ ನೀವೆ ಮಾಡಿಕೊಳ್ಳಿ ಎಂದು ನಮಗೆ ಹೇಳಿರುತ್ತಾರೆ. ನನ್ನ ಚಿಕ್ಕಮ್ಮರವರು ನನ್ನ ಮುಂದೆ ಹೇಳಿರುತ್ತಾರೆ. ನನ್ನ ಚಿಕ್ಕಮ್ಮರವರು ನನ್ನ ಮುಂದೆ ಹೇಳಿದ್ದಳು ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 2 ನೇ ಪ್ರತಿವಾದಿ ಮತ್ತು ಆತನ ಹೆಂಡತಿಗೆ ಯಾವುದೇ ಮಕ್ಕಳು ಜನಿಸಿರಲಿಲ್ಲ ಎಂದರೆ ಸರಿ.

1 ಮತ್ತು 2 ನೇ ವಾದಿಯರನ್ನು ಹೊರತುಪಡಿಸಿ ಉಳಿದ ವಾದಿಯರು ವಿದ್ಯಾವಂತಾಗಿರುತ್ತಾರೆ ಎಂದರೆ ಸಾಕ್ಷಿಯು ಗಂಡು ಮಕ್ಕಳು ಓದಿರುತ್ತಾರೆ ಹಾಗೂ ಹೆಣ್ಣು ಮಕ್ಕಳು ಓದಿರುವುದಿಲ್ಲ ಎಂದು ಹೇಳುತ್ತಾರೆ. ನಾನು ಶಾಲೆಯನ್ನು ಕಲಿತಿರುತ್ತೇನೆ ಎಂದರೆ ಸರಿಯಲ್ಲ. 4 ರಿಂದ 7 ನೇ ವಾದಿಯರು ಒಪ್ಪಿಗೆ ಪತ್ರವನ್ನು

ಬರೆದುಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ಒಪ್ಪಿಗೆ ಪತ್ರ ಬರೆದುಕೊಟ್ಟಿರುತ್ತೇವೆ ಎಂದು ಒಪ್ಪಿಕೊಂಡಿದ್ದಾದರೆ ಈ ದಾವೆಯು ನನ್ನ ವಿರುದ್ಧ ಆಗುತ್ತದೆ ಎಂದು ತಿಳಿದು ಒಪ್ಪಿಗೆ ಪತ್ರವನ್ನು ಬರೆದುಕೊಟ್ಟಿರುವುದಿಲ್ಲ ಎಂದು ಸುಳ್ಳು ಸಾಕ್ಷ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ತಂದೆಯವರು ಮಾರಾಟ ಮಾಡಿದ ವಿಷಯ ಹಾಗೂ 4 ರಿಂದ 7 ನೇ ವಾದಿಯರು ಒಪ್ಪಿಗೆ ಪತ್ರ ಬರೆದುಕೊಟ್ಟಿರುವ ವಿಷಯ ಗೊತ್ತಿದ್ದರೂ ಸಹ ಗೊತ್ತಿರುವುದಿಲ್ಲ ಎಂದು ಸುಳ್ಳು ಸಾಕ್ಷ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

1 ಮತ್ತು 2 ನೇ ಪ್ರತಿವಾದಿಯರು 3 ರಿಂದ 5 ನೇ ಪ್ರತಿವಾದಿಯರಿಗೆ ನೊಂದಾಯಿತ ಖರೀದಿ ಪತ್ರಗಳನ್ನು ಬರೆದುಕೊಟ್ಟಿದ್ದರೂ ಸಹ ಬರೆದುಕೊಟ್ಟಿರುವುದಿಲ್ಲ ಎಂದು ನಾನು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಈಗ ಭೂಮಿಯ ಬೆಲೆಯು ಹೆಚ್ಚಾಗಿರುತ್ತದೆ ಎಂದು ನನಗೆ ಗೊತ್ತಿರುವುದಿಲ್ಲ. ಭೂಮಿಯ ಬೆಲೆಯನ್ನು ಹೆಚ್ಚಾಗಿ ಪಡೆಯುಗೋಸ್ಕರ ನಾನು ಹಾಗೂ ನಮ್ಮ ತಂದೆಯು ಸೇರಿ ಪ್ರತಿವಾದಿಯರ ಮೇಲೆ ಈ ಸುಳ್ಳು ದಾವೆಯನ್ನು ದಾಖಲಿಸಿರುತ್ತೇವೆ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿಯು ಸುಮಾರು 21 ವರ್ಷಗಳ ಹಿಂದೆ ದಾವಾ ಆಸ್ತಿಯನ್ನು ಮಾರಾಟ ಮಾಡಿರುವ ಕಾರಣ ದಾವಾದ ಆಸ್ತಿಯ ಮೇಲೆ ನಮಗೆ ಯಾವುದೇ ರೀತಿಯ ಅಧಿಕಾರ ಇರುವುದಿಲ್ಲ ಎಂದರೆ ಸರಿಯಲ್ಲ. ಕಾಗದ ಬರೆದು ಕೊಟ್ಟಿರವ ವಿಷಯ ನನ್ನ ತಮ್ಮಂದಿರಿಗೆ ಹಾಗೂ ಅಕ್ಕಂದಿರಿಗೆ ಗೊತ್ತಿರುತ್ತದೆ ಅವರು ಈ ಪ್ರಕರಣದಲ್ಲಿ ಬಂದು ಸಾಕ್ಷ ಹೇಳಿದ್ದಾದರೆ ನಿಜ ಸ್ಥಿತಿ ಬಯಲಾಗುತ್ತದೆ ಎನ್ನುವ ಉದ್ದೇಶದಿಂದ ನನ್ನನ್ನು ಸಾಕ್ಷಿ ವಿಚಾರಣೆ ಮಾಡಿರುತ್ತಾರೆ ಎಂದರೆ ಸರಿಯಲ್ಲ.

ಪಾಟೀ ಸವಾಲುಃ 7 ನೇ ಪ್ರತಿವಾದಿಯರ ಪರ ವಕೀಲರಾದ ಶ್ರೀ ಎಂ ವಿ ಕೆ ರವರಿಂದ

7 ನೇ ಪ್ರತಿವಾದಿ ಪರ ವಕೀಲರು ಪಾಟೀ ಸವಾಲಿಗಾಗಿ ಸಮಯ ಕೋರಿರುತ್ತಾರೆ. ಅವರ ಕೋರಿಕೆ ಮೇರೆಗೆ ಸಮಯವನ್ನು ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮುಖಾಂತರ ಬೆರಳಚ್ಚುಗಾರಳಿಂದ ಬೆರಳಚ್ಚು ಮಾಡಿಸಲಾಯಿತು)

**ಓ. ಹೇ. ಕೇ. ಸರಿ ಅದೆ.**

ಹಿರಿಯ ಸಿವಿಲ್ ನ್ಯಾಯಾಧೀಶರು,
ಯಾದಗಿರಿ